ಅ) ಮುಂದೆ ನಡೆಯಲಿರುವ ವಿಶ್ವ ವ್ಯಾಪಾರ ಸಂಘಟನೆ ಸಭೆಯಲ್ಲಿ ಭಾರತದ ಕೃಷಿ ಕ್ಷೇತ್ರವನ್ನು ವಿಶ್ವ ವಾಣಿಜ್ಯ ಒಪ್ಪಂದ ವ್ಯಾಪ್ತಿಯಿಂದ ಹೊರಗಿಡಲು ರಾಜ್ಯ ಸರ್ಕಾರ ಭಾರತ ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತದೆಯೆ?

ಆ) ವಿದೇಶಗಳಿಂದ ಆಮದು ಮಾಡಿಕೊಳ್ಳುವ ವಸ್ತುಗಳ ಪ್ರಮಾಣ ನಿಗದಿಪಡಿಸಲು ಆಮದು ಶುಲ್ಕವನ್ನು ನಿಗದಿ ಮಾಡುವ ಅಧಿಕಾರ ಆಯಾ ದೇಶಗಳಿಗೆ ಇರಬೇಕೆಂದು ಕೇಂದ್ರ ಸರ್ಕಾರದ ಗಮನಕ್ಕೆ ಇದುವರೆವಿಗೂ ಏಕೆ ತಂದಿಲ್ಲ?

ಶ್ರೀ ಅಲ್ಲಂ ವೀರಭದ್ರಪ್ಪ (ತೋಟಗಾರಿಕೆ ರಾಜ್ಯ ಸಚಿವರು):

ಅ) ಇಲ್ಲ.

ಆ) ಕೇಂದ್ರ ಸರ್ಕಾರದ ಗಮನಕ್ಕೆ ತರಲಾಗಿರುತ್ತದೆ.

ಗೌರಿಬಿದನೂರು ತಾಲ್ಲೂಕಿನ ವ್ಯಾಪ್ತಿಯಲ್ಲಿ ಕಳಪೆ ದರ್ಜೆ ರಸಗೊಬ್ಬರ, ಬಿತ್ತನೆಬೀಜ, ಕೀಟನಾಶಕಗಳ ಮಾರಾಟ.

236(2506)

ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್.(ಗೌರಿಬಿದನೂರು): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೌರಿಬಿದನೂರು ತಾಲ್ಲೂಕಿನ ವ್ಯಾಪ್ತಿಯಲ್ಲಿ ಕಳೆದ 3 ವರ್ಷಗಳಿಂದ ಕಳಪೆ ದರ್ಜೆ ರಸಗೊಬ್ಬರ ಬಿತ್ತನೆ ಬೀಜ, ಕೀಟನಾಶಕಗಳ ಮಾರಾಟದ ಪ್ರಕರಣಗಳೆಷ್ಟು? (ಸಂಖ್ಯೆಯ ಪ್ರತ್ಯೇಕ ವಿವರ ನೀಡುವುದು)

ಆ) ಹಾಗಿದ್ದಲ್ಲಿ ಕಳಪೆ ದರ್ಜೆ ಮಾರಾಟಗಾರರ ಮೇಲೆ ತೆಗೆದುಕೊಂಡ ಕ್ರಮವೇನು;

ಇ) ಕಳಪೆ ದರ್ಜೆ ಗುಣಮಟ್ಟದ ಬಿತ್ತನೆ ಬೀಜ ಕೀಟನಾಶಕ, ರಸಗೊಬ್ಬರಗಳನ್ನು ಖರೀದಿಸಿ ನಷ್ಟ ಹೊಂದಿದ ರೈತರಿಗೆ ನೀಡಲಾದ ಪರಿಹಾರದ ಮೊತ್ತವೆಷ್ಟು (ವಿವರ ನೀಡುವುದು)?

ಶ್ರೀ ಟಿ.ಬಿ.ಜಯಚಂದ್ರ (ಕೃಷಿ ಸಚಿವರು):

ಅ, ಆ ಮತ್ತು ಇ) ಕಳೆದ ಮೂರು ವರ್ಷಗಳಲ್ಲಿ ಗೌರಿಬಿದನೂರು ತಾಲ್ಲೂಕಿನಲ್ಲಿ ಬೀಜ, ರಸಗೊಬ್ಬರ ಇವುಗಳಲ್ಲಿ ಕಂಡುಬಂದ ಕಳಪೆ ಮಾದರಿಗಳ ಸಂಖ್ಯೆ ಹಾಗೂ ಕೈಗೊಂಡ ಕ್ರಮದ

ವಿವರಗಳನ್ನು ಹಾಗೂ ನಷ್ಟಹೊಂದಿದ ರೈತರಿಗೆ ನೀಡಲಾದ ಪರಿಹಾರದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ

ಮಾದರಿಗಳು	1998-99	
	ಕಳಪೆ ಗುಣ ಮಟ್ಟವೆಂದು ಕಂಡು ಬಂದ ಮಾದರಿ ಸಂಖ್ಯೆ	ಕೈಗೊಂಡ ಕ್ರಮ
1) ಬಿತ್ತನೆಬೀಜ	1	ಮುಸುಕಿನ ಜೋಳದ ಬಿತ್ತನೆ ಬೀಜ- 1092 ಕೆ.ಜಿ ಕಳಪೆ ದಾಸ್ತಾನನ್ನು ಹರಾಜಿನ ಮೂಲಕ ವಿಲೇ ಮಾಡಲಾಗಿದೆ.
2) ರಸಗೊಬ್ಬರ 17: 17: 17	1.	ಈ ಪೋಷಾಕಾಂಶಗಳ ಪ್ರಮಾಣ ಶೇಕಡ.5 ಕಡಿಮೆ ಇದ್ದು ಉಳಿದ ದಾಸ್ತಾನಿಗೆ ವಿಶ್ಲೇಷಣೆ ಗನುಸಾರವಾಗಿ ಬೆಲೆ ನಿಗಧಿ ಪಡಿಸಿ ಮಾರಾಟ ಮಾಡಲಾಗಿದೆ.

1999-2000		2000-2001	
ಕಳಪೆ ಗುಣ ಮಟ್ಟವೆಂದು ಕಂಡು ಬಂದ ಮಾದರಿ ಸಂಖ್ಯೆ	ಕೈಗೊಂಡ ಕ್ರಮ	ಕಳಪೆ ಗುಣ ಮಟ್ಟವೆಂದು ಕಂಡು ಬಂದ ಮಾದರಿ ಸಂಖ್ಯೆ	ಕೈಗೊಂಡ ಕ್ರಮ
2	ಮುಸುಕಿನ ಜೋಳ -	5	ಮಳೆ ಪ್ರಮಾಣ
(1)	ಮಳೆ ಪ್ರಮಾಣ ಕಡಿಮೆ ಇದ್ದುದರಿಂದ ನಷ್ಟಹೊಂದಿದ ರೈತರಿಗೆ ಶೇಕಡ. 10 ರಂತೆ ಪರಿಹಾರ ನೀಡಲಾಗಿದೆ.	ಭತ್ತ - 1 ಟೊಮೊಟೊ- 3 ಈರುಳ್ಳಿ- 1	ಕಡಿಮೆಯಾಗಿದ್ದು ಭತ್ತದ ಬಿತ್ತನೆ ಬೀಜ ಕೊಂಡ ರೈತರಿಗೆ 4000-00 ಬೆಲೆ ಬಾಳುವ ಬಿತ್ತನೆ ಬೀಜವನ್ನು ಪರಿಹಾರವನ್ನಾಗಿ ನೀಡಲಾಗಿದೆ.
(2)	ಮೊಕದ್ದಮೆಯನ್ನು ದಾಖಲಿಸಲು ಕ್ರಮ ಕೈಗೊಳ್ಳಲಾಗಿದೆ	(2)	ಮೊಕದ್ದಮೆಯನ್ನು ದಾಖಲಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.